## ಸೂಕ್ತಿಪ್ರಭ

**ಸೇ**ಡುಮನೋಭಾವದಿಂದ ಇಡೀ ಜಗತ್ತಿಗೇ ಕೇಡಾಗುತ್ತದೆ. (The policy of an eye for an eye will make the whole world blind)

*—ಮಹಾತ್ಮಾ ಗಾಂಧಿ*

**ಜ**ನರು ಒಂಟಿತನವನ್ನು ಅನುಭವಿಸುವುದಕ್ಕೆ ಕಾರಣ ಅವರು ಗೋಡೆಗಳನ್ನು ಕಟ್ಟುತ್ತಾರೆಯೇ ಹೊರತು ಸೇತುವೆಗಳನ್ನಲ್ಲ. *—ಅನಾಮಿಕ*

**ನಿ**ಮ್ಮ ಆಸೆ ಪೂರ್ತಿಯಾದರೂ ಆಗದಿದ್ದರೂ ನಿರಾಸೆಯಾಗಬಹುದು. *—ಜಾಕ್ ಕಾರ್ನ್‌ಫೀಲ್ಡ್*

**ಯ**ಶಸ್ಸನ್ನು ಪಡೆಯುವುದಕ್ಕಿಂತ ಶ್ರೇಯಸ್ಸನ್ನು ಪಡೆಯಲು ಪ್ರಯತ್ನಿಸಿ. *—ಐನ್‌ಸ್ಟೈನ್*

**ಎ**ಲ್ಲರೂ ತಪ್ಪು ಮಾಡುತ್ತಾರೆ, ಆದರೆ ಜ್ಞಾನಿಗಳು ತಪ್ಪಿನಿಂದ ಕಲಿಯುತ್ತಾರೆ. *—ವಿನ್‌ಸ್ಟನ್ ಚರ್ಚಿಲ್*

**ಕೀ**ರ್ತಿ ಆವಿಯಾಗುತ್ತದೆ, ಜನಪ್ರಿಯತೆ ಆಕಸ್ಮಿಕ, ಸಂಪತ್ತು ಹಾರಿಹೋಗುತ್ತದೆ ಮತ್ತು ಶೀಲವೊಂದೇ ಉಳಿಯುತ್ತದೆ. *—ಹೊರೇಸ್ ಗ್ರೀಲೀ*

**ಯ**ಶಸ್ಸನ್ನು ಪಡೆಯಲು ಎಲಿವೇಟರ್ ಇಲ್ಲ, ನಾವು ಮೆಟ್ಟಲು ಮೂಲಕವೆ ಹೋಗಬೇಕು.*—ಅನಾಮಿಕ*

**ಜ**ಗತ್ತಿನಲ್ಲಿ ಯಾರು ತಾನೇ ತನ್ನ ಪ್ರಯೋಜನಕ್ಕಾಗಿ ಬದುಕುವುದಿಲ್ಲ? ಪರೋಪಕಾರಕ್ಕಾಗಿ ಯಾರು ಬದುಕುತ್ತಾರೊ ಅವರ ಬದುಕೇ ಬದುಕು.

*—ಸುಭಾಷಿತ*

**ನೀ**ನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ. *—ಮಹಾತ್ಮಾ ಗಾಂಧಿ.*

**ಸ**ಹಾಯ ಮಾಡುವ ಕೈಗಳು ಪ್ರಾರ್ಥನೆ ಮಾಡುವ ತುಟಿಗಳಿಗಿಂತ ಲೇಸು. *—ಆರ್.ಜಿ. ಇಂಗರ್‌ಸಾಲ್*

**ನೀ**ನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ. *—ಮಹಾತ್ಮಾ ಗಾಂಧಿ.*

**ಆಡದೆ ಕೊಡುವವನು ರೂಢಿಯೊಳಗುತ್ತಮನು**
**ಆಡಿ ಕೊಡುವವನು ಮಧ್ಯಮನಧಮ ತಾ-**
**ನಾಡಿ ಕೊಡದವನು ಸರ್ವಜ್ಞ ॥** *—ಸರ್ವಜ್ಞ*

ನಿನ್ನ ಕಡೆ ಚಾಚಿದ ಕೈಯಲ್ಲಿ ನೀನಿಟ್ಟ ನಾಣ್ಯವೇ ನಿನ್ನ ಶ್ರೀಮಂತ ಹೃದಯವನ್ನು ದೇವರ ಹೃದಯದೊಂದಿಗೆ ಒಂದು ಮಾಡುವ ಬಂಗಾರದ ಸರಪಣಿ.

*—ಖಲೀಲ್ ಗಿಬ್ರಾನ್.*

# ಪ್ರಾರ್ಥನೆ

*ಶ್ರೀಕುಲಶೇಖರಾಳ್ವಾರ್ ವಿರಚಿತ 'ಮುಕುಂದಮಾಲೆ'ಯಿಂದ*

ಜಯತು ಜಯತು ದೇವೋ ದೇವಕೀನಂದನೋಽಯಂ
ಜಯತು ಜಯತು ಕೃಷ್ಣೋ ವೃಷ್ಣಿವಂಶಪ್ರದೀಪಃ ।
ಜಯತು ಜಯತು ಮೇಘಶ್ಯಾಮಲಃ ಕೋಮಲಾಂಗೋ
ಜಯತು ಜಯತು ಪೃಥ್ವೀಭಾರನಾಶೋ ಮುಕುಂದಃ ॥ ೧ ॥

ದೇವಕೀನಂದನನಾದ ದೇವದೇವನಿಗೆ ಜಯವಾಗಲಿ; ವೃಷ್ಣಿವಂಶ ಪ್ರದೀಪನಾದ ಶ್ರೀಕೃಷ್ಣನಿಗೆ ಜಯವಾಗಲಿ; ಮೇಘದಂತೆ ಶ್ಯಾಮಲವರ್ಣನೂ, ಕೋಮಲಾಂಗನೂ ಆದ (ನನ್ನ ಸ್ವಾಮಿಗೆ) ಜಯವಾಗಲಿ; ಭೂಭಾರವನ್ನು ಪರಿಹರಿಸುವವನಾದ ಮುಕುಂದನಿಗೆ ಜಯವಾಗಲಿ.

ನಾಸ್ಥಾ ಧರ್ಮೇ ನ ವಸುನಿಚಯೇ ನೈವ ಕಾಮೋಪಭೋಗೇ
ಯದ್ಯದ್ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಮ್
ಏತತ್ಪ್ರಾರ್ಥ್ಯಂ ಮಮ ಬಹುಮತಂ ಜನ್ಮ ಜನ್ಮಾಂತರೇಽಪಿ
ತ್ವತ್ಪಾದಾಂಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು ॥ ೨ ॥

ಹೇ ಭಗವಂತನೆ, ನನಗೆ ಧರ್ಮದಲ್ಲಾಗಲೀ, ದ್ರವ್ಯಸಂಚಯದಲ್ಲಾಗಲೀ, ವಿಷಯಸುಖಗಳ ಭೋಗದಲ್ಲಾಗಲೀ ಆಸಕ್ತಿಯಿಲ್ಲ; ಪೂರ್ವಕರ್ಮಾನುಸಾರವಾಗಿ ಯಾವುದು ಹೇಗೆ ನಡೆಯಬೇಕೊ ಅದು ಹಾಗೆಯೇ ನಡೆಯಲಿ; ಆದರೆ ನಾನು ಅತಿ ಮುಖ್ಯವೆಂದು ಭಾವಿಸಿರುವ ಇದೊಂದು ಪ್ರಾರ್ಥನೆಯುಂಟು; ಈ ಜನ್ಮದಲ್ಲಿಯೂ ಮತ್ತು ಮುಂದೆ ಬರಬಹುದಾದ ಇತರ ಜನ್ಮಗಳಲ್ಲಿಯೂ ಕೂಡ ನಿನ್ನ ಅಡಿದಾವರೆಗಳಲ್ಲಿ ಭಕ್ತಿಯು ನಿಶ್ಚಲವಾಗಿರಲಿ.

ಕೃಷ್ಣ ತ್ವದೀಯಪದಪಂಕಜಪಂಜರಾಂತಂ
ಅದ್ಯೈವ ಮೇ ವಿಶತು ಮಾನಸರಾಜಹಂಸಃ ।
ಪ್ರಾಣಪ್ರಯಾಣ ಸಮಯೇ ಕಫವಾತಪಿತ್ತೈಃ
ಕಂಠಾವರೋಧನವಿಧೌ ಸ್ಮರಣಂ ಕುತಸ್ತೇ ॥೩॥

ಹೇ ಕೃಷ್ಣ, ನನ್ನ ಮನಸ್ಸೆಂಬ ರಾಜಹಂಸವು ನಿನ್ನ ಪಾದಕಮಲಗಳೆಂಬ ಪಂಜರದಲ್ಲಿ ಈಗಲೇ ಸೇರಿಕೊಳ್ಳಲಿ; (ಏಕೆಂದರೆ) ಮರಣ ಕಾಲದಲ್ಲಿ ಕಫವಾತಪಿತ್ತಗಳಿಂದ ಕಂಠವು ಕಟ್ಟಿರುವಾಗ ನಿನ್ನ ಸ್ಮರಣೆ ಹೇಗೆ ಸಾಧ್ಯವಾದೀತು?

ಚಿಂತಯಾಮಿ ಹರಿಮೇವ ಸಂತತಂ
ಮಂದಮಂದಹಸಿತಾನನಾಂಬುಜಮ್ ।
ನಂದಗೋಪತನಯಂ ಪರಾತ್ಪರಂ
ನಾರದಾದಿಮುನಿಬೃಂದವಂದಿತಮ್ ॥೪॥

ಮಂದಹಾಸದಿಂದ ಕೂಡಿದ ವದನಾರವಿಂದವುಳ್ಳ, ನಾರದಾದಿ ಮುನಿಗಳಿಂದ ವಂದಿಸಲ್ಪಡುವ, ನಂದಗೋಪನ ಮಗನಾದ ಪರಮೇಶ್ವರನಾದ ಶ್ರೀಹರಿಯನ್ನೇ ಎಡೆಬಿಡದೆ ಧ್ಯಾನಿಸುತ್ತೇನೆ.